**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **207** |
| **ಸದಸ್ಯರ ಹೆಸರು** | : | **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **18.08.2026** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕೆ ಕಾಲೇಜುಗಳು ಯಾವುವು; ಕಳೆದ ವರ್ಷಗಳಲ್ಲಿ ರಾಜ್ಯ ಸರ್ಕಾರವು ಈ ಕಾಲೇಜುಗಳಿಗೆ ವರ್ಷವಾರು ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; ಅನುದಾನವನ್ನು ಯಾವ ಯಾವ ಮೂಲಸೌಕರ್ಯ ಅಭಿವೃದ್ಧಿ, ಶೈಕ್ಷಣಿಕ, ಸಂಶೋಧನಾ ಹಾಗೂ ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲಾಗಿದೆ; | ರಾಜ್ಯದಲ್ಲಿ ಪ್ರಸ್ತುತ ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರು ಮಾತ್ರ ಕಾರ್ಯನಿರ್ವಹಿಸುತ್ತಿದೆ.<br><br>ಕಳೆದ ವರ್ಷ (2025-26ನೇ ಸಾಲಿನಲ್ಲಿ) ರಾಜ್ಯ ಸರ್ಕಾರವು ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರಿಗೆ ಎಂದು ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆಗೊಂಡಿರುವುದಿಲ್ಲ. ವಿಶ್ವವಿದ್ಯಾಲಯದಿಂದ ರೂ. 457.90 ಲಕ್ಷಗಳನ್ನು ಹಂಚಿಕೆ ಮಾಡಿ ಶೈಕ್ಷಣಿಕ, ಸಂಶೋಧನಾ ಹಾಗೂ ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮ ಮತ್ತು ಮಹಾವಿದ್ಯಾಲಯದ ಇತರೆ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಿಗಾಗಿ ಬಿಡುಗಡೆಗೊಳಿಸಿ ಬಳಸಲಾಗಿದೆ. |
| ಆ | ಮಂಗಳೂರು ಮೀನುಗಾರಿಕೆ ಕಾಲೇಜಿನಲ್ಲಿ ಪ್ರಸ್ತುತ ಲಭ್ಯವಿರುವ ಮೂಲಭೂತ ಸೌಲಭ್ಯಗಳು ಯಾವುವು; ಕಾಲೇಜಿನಲ್ಲಿ ಮಂಜೂರಾದ ಮತ್ತು ಕಾರ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಸಂಖ್ಯೆ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ ನೀಡುವುದು. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಅವುಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು. | ಮಂಗಳೂರು ಮೀನುಗಾರಿಕಾ ಕಾಲೇಜಿನಲ್ಲಿ ಪ್ರಸ್ತುತ ಈ ಕೆಳಕಂಡಂತೆ ಮೂಲಭೂತ ಸೌಲಭ್ಯಗಳು ಲಭ್ಯವಿರುತ್ತವೆ.<br><br>1. **ಶೈಕ್ಷಣಿಕ ಸೌಲಭ್ಯಗಳು**<br>• ಸುಸಜ್ಜಿತ ತರಗತಿ ಕೊಠಡಿಗಳು<br>• LCD ಪ್ರೊಜೆಕ್ಟರ್‌ಗಳು ಮತ್ತು ಇಂಟರಾಕ್ಟಿವ್ ಬೋರ್ಡ್‌ಗಳು<br>• ವಿವಿಧ ವಿಭಾಗಗಳಿಗೆ ಪ್ರತ್ಯೇಕ ಪ್ರಾಯೋಗಿಕ ತರಗತಿ ಕೊಠಡಿಗಳು<br>• ಮೀನುಗಾರಿಕಾ ಶಿಕ್ಷಣ ಮತ್ತು ಸಂಶೋಧನೆಗೆ ವಿಶೇಷ ಪ್ರಯೋಗಾಲಯಗಳು<br>• ಗ್ರಂಥಾಲಯ ಮತ್ತು ಓದುವ ಸೌಲಭ್ಯಗಳು<br><br>**2. ಪ್ರಯೋಗಾಲಯ ಸೌಲಭ್ಯಗಳು**<br>• ವಿವಿಧ ವಿಭಾಗಗಳ ಬೋಧನೆ ಮತ್ತು ಸಂಶೋಧನಾ ಪ್ರಯೋಗಾಲಯಗಳು<br>• ಜಲಚರ ಸಾಕಾಣಿಕೆ ಮತ್ತು ಮೀನು ಜೀವಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗಾಲಯ ಸೌಲಭ್ಯಗಳು<br>• ವಿದ್ಯಾರ್ಥಿಗಳ ಪ್ರಾಯೋಗಿಕ ತರಬೇತಿ ಮತ್ತು ಸಂಶೋಧನೆಗೆ ಅಗತ್ಯವಾದ ಸೌಲಭ್ಯಗಳು<br><br>**3. ಮೀನು ಸಾಕಣಿಕೇಂದ್ರ ಮತ್ತು ಕ್ಷೇತ್ರ ಸೌಲಭ್ಯಗಳು**<br>• ಬೋಧನೆ ಮತ್ತು ಸಂಶೋಧನಾ ಆಧುನೀಕೃತ ಮೀನುಗಾರಿಕಾ ಮೀನುಸಾಕಣೆ ಕೇಂದ್ರ<br>• ಜಲಚರ ಸಾಕಾಣಿಕೆಯ ಬೋಧನೆ, ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆ ಸೌಲಭ್ಯಗಳು<br>• ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವ ಪಡೆಯಲು ಕ್ಷೇತ್ರ ತರಬೇತಿ ಸೌಲಭ್ಯಗಳು |

**4. ವಿದ್ಯಾರ್ಥಿ ಸೌಲಭ್ಯಗಳು**

- ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳು
- ಕ್ರೀಡೆ ಮತ್ತು ಆಟಗಳ ಸೌಲಭ್ಯಗಳು
- ಸುಸಜ್ಜಿತ ಈಜು ಕೊಳದ ಸೌಲಭ್ಯ

**5. ಆಡಳಿತಾತ್ಮಕ ಮತ್ತು ಸಹಾಯಕ ಸೌಲಭ್ಯಗಳು**

- ಆಡಳಿತ ಕಚೇರಿಗಳು
- ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊಠಡಿಗಳು
- ಪರೀಕ್ಷೆ ಮತ್ತು ಶೈಕ್ಷಣಿಕ ಸಹಾಯಕ ಸೌಲಭ್ಯಗಳು
- ಔಷಧಾಲಯ/ಆರೋಗ್ಯ ಸೇವಾ ಸೌಲಭ್ಯ

**.6. ಕ್ಯಾಂಪಸ್ ಮೂಲಸೌಕರ್ಯ**

- ಸಭಾಂಗಣ
- ವಿಚಾರ ಸಂಕಿರಣ ಸಭಾಂಗಣ
- ಆಂತರಿಕ ರಸ್ತೆ ವ್ಯವಸ್ಥೆ
- ಅಗತ್ಯವಿರುವ ಸ್ಥಳಗಳಲ್ಲಿ CCTV ಸೌಲಭ್ಯ

**7. ಸಾರಿಗೆ ಸೌಲಭ್ಯಗಳು**

- ಯೆಕ್ಕೂರು ಮುಖ್ಯ ಆವರಣ ಮತ್ತು ಹೊಯಿಗೆ ಬಜಾರ್ ತಂತ್ರಜ್ಞಾನ ವಿಭಾಗದ ನಡುವಿನ ಸಂಚಾರ ಸೌಲಭ್ಯ

**8. ಸಂಶೋಧನೆ ಮತ್ತು ವಿಸ್ತರಣಾ ಸೌಲಭ್ಯಗಳು**

- ಮೀನುಗಾರಿಕೆ ಮತ್ತು ಜಲಚರ ಸಾಕಾಣಿಕೆಗೆ ಸಂಬಂಧಿಸಿದ ಸಂಶೋಧನಾ ಮೂಲಸೌಕರ್ಯ
- ರೈತರು ಮತ್ತು ಮೀನುಗಾರರಿಗೆ ತರಬೇತಿ ಹಾಗೂ ವಿಸ್ತರಣಾ ಚಟುವಟಿಕೆಗಳ ಸೌಲಭ್ಯ

**ಬೋಧಕರ ವೃಂದದ ಹುದ್ದೆಗಳ ವಿವರ:**

| ಕ್ರ. ಸಂ | ಹುದ್ದೆಯ ಹೆಸರು | ಮಂಜುರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಪ್ರಾಧ್ಯಾಪಕರು | 07 | 01 | 06 |
| 2 | ಸಹ ಪ್ರಾಧ್ಯಾಪಕರು | 15 | 04 | 11 |
| 3 | ಸಹಾಯಕ ಪ್ರಾಧ್ಯಾಪಕರು | 37 | 16 | 21 |
| | **Total** | **59** | **21** | **38** |

**ಬೋಧಕೇತರ ವೃಂದದ ಹುದ್ದೆಗಳ ವಿವರ:**

| ಕ್ರ. ಸಂ | ಹುದ್ದೆಯ ಹೆಸರು | ಮಂಜುರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| **4** | ಬೋಧಕೇತರ ಹುದ್ದೆಗಳು | **137** | **14** | **123** |

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಮಹಾವಿದ್ಯಾಲಯದಲ್ಲಿ ಮಂಜೂರಾಗಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಒಟ್ಟು-08 ಸಹಾಯಕ ಪ್ರಾಧ್ಯಾಪಕರನ್ನು ಹಾಗೂ ಮಂಜೂರಾಗಿ ಖಾಲಿ ಇರುವ ಬೋಧಕೇತರ ಹುದ್ದೆಗಳ ಎದುರಾಗಿ ಒಟ್ಟು-41 ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಸೇವೆಯನ್ನು ಒದಗಿಸಲಾಗುತ್ತಿದೆ.

ಸದರಿ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.

| | | |
|---|---|---|
| ಇ | ಮಂಗಳೂರು ಮೀನುಗಾರಿಕೆ ಕಾಲೇಜಿನಲ್ಲಿ ಘೋಷಿಸಲಾದ Centre of Excellence ಸ್ಥಾಪನೆ ಯಾವ ಹಂತದಲ್ಲಿದೆ; ಇದುವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಹಾಗೂ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು. | ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯಕ್ಕೆ ಘೋಷಿಸಲಾಗಿರುವ ಸೆಂಟರ್ ಆಪ್ ಎಕ್ಸಲೇನ್ಸ್ (Centre of Excellence) ಸ್ಥಾಪನೆ ಕಾರ್ಯವು ಇನ್ನೂ ಕೈಗೊಳ್ಳಬೇಕಾಗಿದೆ. ಸದರಿ ಕಾರ್ಯಕ್ಕಾಗಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಅನುದಾನ ಬಿಡುಗಡೆಯಾದ ನಂತರ, ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು, ಸೆಂಟರ್ ಆಪ್ ಎಕ್ಸಲೆನ್ಸ್ ಸ್ಥಾಪನೆಗೆ ಸಂಬಂಧಿಸಿದ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| ಈ | ಕಾಲೇಜಿನಲ್ಲಿ ಹೊಸ ಶೈಕ್ಷಣಿಕ ಕಟ್ಟಡಗಳು, ಆಧುನಿಕ ಪ್ರಯೋಗಾಲಯಗಳು, ವಿದ್ಯಾರ್ಥಿ ವಸತಿ ನಿಲಯಗಳು ಹಾಗೂ ಸಂಶೋಧನಾ ಸೌಲಭ್ಯಗಳ ಅಭಿವೃದ್ಧಿಗೆ ಸರ್ಕಾರ ಹೊಸ ಯೋಜನೆಗಳನ್ನು ರೂಪಿಸಿರುವುದೇ; ರೂಪಿಸಿದ್ದರೆ, ಅದರ ವಿವರವೇನು. | ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ಸ್ಥಾಪನೆ, ಪ್ರಯೋಗಾಲಯ ನಿರ್ಮಾಣ, ಮತ್ತು ಈಗಾಗಲೇ ಇರುವ ವಿವಿಧ ವಿಭಾಗಗಳ ನವೀಕರಣ ಹಾಗೂ ದುರಸ್ತಿ ಕಾಮಗಾರಿಗಳು, ಹಾಗೂ ಅಗತ್ಯವಿರುವ ವಿವಿಧ ಉಪಕರಣಗಳ ಖರೀದಿಗಾಗಿ ₹500.00 ಲಕ್ಷಗಳ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅನುದಾನವು ಬಿಡುಗಡೆಯಾದ ನಂತರ, ನಿಯಮಾನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. |
| ಉ | ರಾಜ್ಯದ ಕರಾವಳಿ ಭಾಗದ ಮೀನುಗಾರಿಕೆ ಕ್ಷೇತ್ರದ ಅಗತ್ಯಕ್ಕೆ ಅನುಗುಣವಾಗಿ ಹೊಸ ಮೀನುಗಾರಿಕೆ ಕಾಲೇಜುಗಳು ಅಥವಾ ಪ್ರಾದೇಶಿಕ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದರೆ ಅದರ ಪ್ರಸ್ತುತ ಸ್ಥಿತಿಗತಿಯ ವಿವರಗಳೇನು? | ರಾಜ್ಯದ ಕರಾವಳಿ ಭಾಗದ ಮೀನುಗಾರಿಕೆ ಕ್ಷೇತ್ರದ ಅಗತ್ಯಕ್ಕೆ ಅನುಗುಣವಾಗಿ ಹೊಸ ಮೀನುಗಾರಿಕೆ ಕಾಲೇಜುಗಳು ಅಥವಾ ಪ್ರಾದೇಶಿಕ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ಕುರಿತು ವಿಶ್ವವಿದ್ಯಾಲಯದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಸಂಖ್ಯೆ:ಪಸಮೀ 282 ಪಅಸೇ 2026**

**(ಸಿ. ಪುಟ್ಟರಂಗ ಶೆಟ್ಟಿ)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು